ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ - ಎಲ್ಲರೂ ಬೆಳೆಯೋಣ

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01,**

**ದೂರವಾಣಿ: 080-22483580, 22484720, ಫಾಕ್ಸ್ : 080-22104179, 22126718 ಇ-ಮೇಲ್: kpsssk2018@gmail.com**

No.: 12086/SSK/KPS/ಸ.ಸೂ.ಪ/2018-19 **ದಿನಾಂಕ: 18.01.2019**

## <u>ಜ್ಞಾಪನ</u>

ವಿಷಯ: ಕೆಪಿಎಸ್ ಶಾಲೆಗಳಿಗೆ ಭೇಟಿ ನೀಡುವ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್‌ನ ವಾಸ್ತುಶಿಲ್ಪ ವಿಭಾಗದ ಬೋಧಕ ವರ್ಗ ಹಾಗೂ ವಿದ್ಯಾರ್ಥಿಗಳಿಗೆ ಅವಶ್ಯ ಮಾಹಿತಿ ಹಾಗೂ ಸಹಕಾರ ನೀಡುವ ಕುರಿತು.

ಉಲ್ಲೇಖ: ಕಛೇರಿ ಪತ್ರ ಸಂಖ್ಯೆ: No.:SSA/QMT/KPS/Others/2017-18, ದಿನಾಂಕ:18.01.2019.

*********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದನ್ವಯ ಉಡುಪಿ, ಹಾಸನ, ಕೊಡಗು ಹಾಗೂ ಉತ್ತರಕನ್ನಡ ಜಿಲ್ಲೆಗಳಲ್ಲಿನ ಆಯ್ದ ಕೆಪಿಎಸ್ ಶಾಲೆಗಳ 'ಸಮಗ್ರ ಯೋಜನೆ ಹಾಗೂ ಕಟ್ಟಡ ವಿನ್ಯಾಸ' ರೂಪಿಸುವ ಕುರಿತು ನಿರ್ದೇಶಕರು, ಎಫ್.ಓ.ಎ, ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಇವರನ್ನು ಕೋರಲಾಗಿತ್ತು.

ಈ ಹಿನ್ನಲೆಯಲ್ಲಿ ಸದರಿಯವರು ಮೇಲ್ಕಂಡ ಜಿಲ್ಲೆಗಳ 12 ಕೆಪಿಎಸ್‌ಗಳಲ್ಲಿ (ಪಟ್ಟಿಯನ್ನು ಲಗತ್ತಿಸಿದೆ) ಈ ಕಾರ್ಯವನ್ನು ಕೈಗೆತ್ತಿಕೊಂಡಿರುತ್ತಾರೆ. ಯೋಜನೆ ರೂಪಿಸುವ ಸಲುವಾಗಿ ಸದರಿಯವರು ತಮ್ಮ ಬೋಧಕ ವರ್ಗ ಮತ್ತು ವಿದ್ಯಾರ್ಥಿಗಳೊಂದಿಗೆ ಈ 12 ಕೆಪಿಎಸ್ ಶಾಲೆಗಳಿಗೆ ಭೇಟಿ ನೀಡಿ, ಶಾಲಾ ಮುಖ್ಯಸ್ಥರು ಹಾಗೂ ಸಿಬ್ಬಂದಿಯವರೊಡನೆ ಸಮಾಲೋಚನೆ ನಡೆಸಿ, ಅವಶ್ಯ ಮಾಹಿತಿ ಸಂಗ್ರಹಿಸುತ್ತಾರೆ.

**ಭೇಟಿಯ ಸಂದರ್ಭದಲ್ಲಿ ಸದರಿಯವರಿಗೆ ಈ ಕೆಳಕಂಡ ಮಾಹಿತಿ ಒದಗಿಸುವುದು:**

- ಕೆಪಿಎಸ್‌ನ ಎಲ್ಲಾ ಅಂಗ ಸಂಸ್ಥೆಗಳ ಅಂದರೆ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ವಿಭಾಗದ ನಿವೇಶನ ದಾಖಲೆಗಳ ಮಾಹಿತಿ, ಎಲ್ಲಾ ನಿವೇಶನಗಳ ವಿಸ್ತೀರ್ಣ, ಮೇರೆಗಳು, ಪ್ರಸ್ತುತವಿರುವ ಕಟ್ಟಡ/ಕೊಠಡಿಗಳ ಮಾಹಿತಿ ನೀಡುವುದು ಹಾಗೂ ವೀಕ್ಷಣೆ ಮಾಡಿಸುವುದು.
- ಪ್ರಸ್ತುತ ಇರುವ ಕಟ್ಟಡಗಳ ಅಳತೆ, ಸ್ಥಿತಿಗತಿ ಇವುಗಳ ಮಾಹಿತಿ ನೀಡುವುದು.
- ಕಟ್ಟಡದ ನಕ್ಷೆ/ನಿವೇಶನದ ನಕ್ಷೆ (Plan) ಒದಗಿಸುವುದು.
- ಕೆಪಿಎಸ್ ಒಳಗೊಳ್ಳಬೇಕಾದ ಭೌತಿಕ ಸೌಲಭ್ಯಗಳು, ಶೈಕ್ಷಣಿಕ ಸೌಲಭ್ಯಗಳು, ಆಟದ ಮೈದಾನ ಮತ್ತು ಇತರೆ ಪೂರಕ ಸೌಲಭ್ಯಗಳ ಬಗ್ಗೆ ಮಾರ್ಗಸೂಚಿಯಲ್ಲಿ ವಿವರವಾಗಿ ಮಾಹಿತಿ ನೀಡಲಾಗಿದೆ. ಇವುಗಳನ್ನು ಆಧರಿಸಿ ಆಯಾ ಕೆಪಿಎಸ್ ಶಾಲೆಯವರು ಗುರುತಿಸಿರುವ ಅವಶ್ಯಕತೆಗಳ ಪಟ್ಟಿ, ಅಳವಡಿಸಬೇಕಾದ ಹೆಚ್ಚುವರಿ ಮೂಲಭೂತ ಸೌಲಭ್ಯಗಳ ಪಟ್ಟಿ, ಭವಿಷ್ಯದಲ್ಲಿ ಮಕ್ಕಳ ದಾಖಲಾತಿ ಹೆಚ್ಚಳದಿಂದ/ ವಿಭಾಗಗಳ ಸೇರ್ಪಡೆಯಿಂದ ಉಂಟಾಗಬಹುದಾದಂತಹ ಹೆಚ್ಚುವರಿ ಅವಶ್ಯಕತೆಗಳು (Infrastructure Projection Plan) ಇವುಗಳ ಮಾಹಿತಿ ಒದಗಿಸುವುದು.

*ಪು.ತಿ.ನ*

ಈ ಮೇಲಿನ ಎಲ್ಲಾ ಅಂಶಗಳ ಕುರಿತು ಸಂಬಂಧಿಸಿದ ಕೆಪಿಎಸ್‌ನವರು ಅವಶ್ಯ ಪೂರ್ವ ತಯಾರಿ ಮಾಡಿಟ್ಟುಕೊಳ್ಳುವುದು. ಭೇಟಿ ನೀಡುವ ಸಂದರ್ಭದಲ್ಲಿ ಕೆಪಿಎಸ್ ಜಿಲ್ಲಾ ನೋಡಲ್ ಅಧಿಕಾರಿ ಹಾಗೂ ಸಂಬಂಧಿಸಿದ ಕೆಪಿಎಸ್ ನೋಡಲ್ ಅಧಿಕಾರಿಗಳು ಖುದ್ದು ಹಾಜರಾಗಿ, ಸೂಕ್ತ ಸಲಹೆ-ಸಹಕಾರ ನೀಡುವಂತೆ ಸೂಚಿಸಿದೆ. ಹಾಗೂ ಈ ಬಗ್ಗೆ ಶಾಲೆಯವರಿಗೆ ಪೂರ್ವಭಾವಿಯಾಗಿ ಮಾಹಿತಿ ನೀಡಲು ತಿಳಿಸಿದೆ.

ಸದರಿ 12 ಕೆಪಿಎಸ್‌ಗಳಿಂದ ಶೈಕ್ಷಣಿಕ ಮತ್ತು ಶೈಕ್ಷಣಿಕೇತ್ರರ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಜಿಲ್ಲಾ ಕೆಪಿಎಸ್ ನೋಡಲ್ ಅಧಿಕಾರಿಗಳು ಸಂಗ್ರಹಿಸಿ, ರಾಜ್ಯ ಕಛೇರಿಗೆ ಇ-ಮೇಲ್ ಮೂಲಕ ತುರ್ತಾಗಿ ಕಳುಹಿಸಿಕೊಡಲು ಸೂಚಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ-ಬೆಂಗಳೂರು

**ಇವರಿಗೆ :**

1. ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ, ಹಾಸನ, ಕೊಡಗು ಹಾಗೂ ಉತ್ತರಕನ್ನಡ ಜಿಲ್ಲೆಗೆ ಅಗತ್ಯ ಕ್ರಮಕ್ಕಾಗಿ
2. ಡಯಟ್‌ಗಳ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ. ಉಡುಪಿ, ಹಾಸನ, ಕೊಡಗು ಹಾಗೂ ಉತ್ತರಕನ್ನಡ ಜಿಲ್ಲೆಗೆ ಅಗತ್ಯ ಕ್ರಮಕ್ಕಾಗಿ.
3. ಜಿಲ್ಲಾ ಕೆಪಿಎಸ್ ನೋಡಲ್ ಅಧಿಕಾರಿಗಳು, ಉಡುಪಿ, ಹಾಸನ, ಕೊಡಗು ಹಾಗೂ ಉತ್ತರಕನ್ನಡ ಜಿಲ್ಲೆ ಇವರಿಗೆ ತುರ್ತು ಕ್ರಮಕ್ಕಾಗಿ.
4. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹೊನ್ನಾವರ, ಭಟ್ಕಳ, ಕಾರ್ಕಳ, ಉಡುಪಿ, ಬೇಲೂರು, ಸಕಲೇಶಪುರ, ಬ್ರಹ್ಮಾವರ, ಕುಂದಾಪುರ, ಹಾಸನ, ವಿರಾಜಪೇಟೆ, ಬೈಂದೂರು ಇವರಿಗೆ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮುಖಾಂತರ.
5. 12 ಕೆ.ಪಿ.ಎಸ್ ಶಾಲೆಗಳ ಪ್ರಾಂಶುಪಾಲರು ಹಾಗೂ ಉಪಪ್ರಾಂಶುಪಾಲರಿಗೆ (ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮುಖಾಂತರ)

## Annexure-1

**Contact Details:**

| Sl.No. | District Name | Block Name | KPS School Name | Students Taking up the Project | DDPI(Admin) Contact Number |
|---|---|---|---|---|---|
| 1. | Uttara Kannda | Honnavar | KPS Maniki Honnavar | Section-A (40 students) VI Sem | 9448999354 |
| 2. | Uttara Kannda | Bhatkal | KPS Ternamakki | | |
| 3. | Udupi | Karkala | KPS Muniyal | Mr.ShadabM Khan, VIII Sem | 9448999353 |
| 4. | Udupi | Udupi | KPS Hiriyadka | Section–B, (40 students) VI Sem | 9448999353 |
| 5. | Hassan | Belur | KPS Halebeedu | Section–C, (40 students) VI Sem | 9448999342 |
| 6. | Hassan | Sakleshpura | KPS Hetthuru | | |
| 7. | Udupi | Brahmavara | KPS Kokkarne | Section–D, (40 students) VI Sem | 9448999353 |
| 8. | Udupi | Kundapura | KPS Koteshwara | | |
| 9. | Hassan | Hassan | KPS Byalahally | Ms. Nikitha Jain, VIII Sem | 9448999342 |
| 10. | Udupi | Udupi | KPS Padubidri | Ms. Smrithi Shetty, VIII Sem | 9448999353 |
| 11. | Kodagu | Virajpet | KPS Ponnampet | Mr. Nirajan K.A, VIII Sem | 9448999344 |
| 12. | Udupi | Byndoor | KPS Vandse | Ms.Ashwika Elizabeth George. | 9448999353 |